**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ. 237/2024**

**ಸಾಕ್ಷಿಯನ್ನು ದಿನಾಂಕಃ 23.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರ ಶ್ರೀ. ಎಂ.ಜಿ.ಆರ್./ಶ್ರೀ. ಹೆಚ್.ಕೆ.ಪಿ.ವಕೀಲರಿಂದಃ**

ಈ ಪ್ರಕರಣದಲ್ಲಿ ನಾನು ಪಿರ್ಯಾದಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದನ್ನು ನನ್ನ ಮಾಹಿತಿಯ ಮೇರೆಗೆ ನನ್ನ ವಕೀಲರು ತಯಾರಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯವಾಗಿರುತ್ತವೆ. ಅದಕ್ಕೆ ನಾನು ನನ್ನ ಸಹಿಗಳನ್ನು ಹಾಕಿರುತ್ತೇನೆ. ಈ ಕೆಳಗಿನ ದಾಖಲೆಗಳನ್ನು ನಿಶಾನೆಗಳಾಗಿ ಹಾಜರುಪಡಿಸಿರುತ್ತೇನೆ.

ಆರೋಪಿ ನನಗೆ ನೀಡಿದ ಒಂದು ಚೆಕ್ ಅನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-1** ಮತ್ತು ಆರೋಪಿಯ ಸಹಿಯನ್ನು **ನಿ.ಪಿ.-1(ಎ)** ಎಂದು ಗುರುತಿಸಲಾಯಿತು. ಬ್ಯಾಂಕ್‌ನವರು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-2** ಎಂದು, ಆರೋಪಿಗೆ ವಕೀಲರ ಮುಖಾಂತರ ನೀಡಿದ ನೋಟೀಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-3** ಎಂದು, ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-4** ಎಂದು, ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-5** ಎಂದು, ಆರೋಪಿ ನೀಡಿದ ಪ್ರತ್ಯುತ್ತರವನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-6** ಎಂದು, ಸದರಿ ಪ್ರತ್ಯುತ್ತರಕ್ಕೆ ನೀಡಿದ ಮರು ಉತ್ತರವನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-7** ಎಂದು, ಇನ್ನೊಂದು ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-8** ಎಂದು, ಇನ್ನೊಂದು ಅಂಚೆ ಸ್ವೀಕೃತಿಯನ್ನು

ಹಾಜರುಪಡಿಸಿದ್ದು ಅದನ್ನು **ನಿ.ಪಿ.-9** ಎಂದು ಗುರುತಿಸಲಾಯಿತು. ಆದ್ದರಿಂದ ಆರೋಪಿಯ ವಿರುದ್ಧ ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ.ಎಸ್.ಎಂ./ ಶ್ರೀ.ಪಿ.ಎಂ.ಜಿ. ವಕೀಲರಿಂದಃ**

ನಾನು ಎಂ.ಎಸ್.ಡಬ್ಲೂ. ಪದವೀಧರನಾಗಿರುತ್ತೇನೆ. ನಾನು 2015 ನೇ ಇಸವಿಯಲ್ಲಿ ಸದರಿ ಎಂ.ಎಸ್.ಡಬ್ಲೂ. ಪದವಿ ಮುಗಿಸಿರುತ್ತೇನೆ. ಈಗ ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ನನಗೆ ಆರೋಪಿ ಸುಮಾರು 03 ವರ್ಷಗಳಿಂದ ಪರಿಚಿತರು. ಆರೋಪಿ ನನಗೆ ನಮ್ಮ ಊರಾದ ಚಿಕ್ಕಕೆರೆಯೂರಿನಲ್ಲಿ ಪರಿಚಯವಾಗಿರುತ್ತಾರೆ. ನಾನು ಆರೋಪಿಗೆ ದಿನಾಂಕಃ 23.06.2023 ರಂದು ಸಾಲ ನೀಡಿರುತ್ತೇನೆ. ಸದರಿ ದಿನದಂದು ಹಣ ಕೊಡುವ ಮೊದಲು 02-03 ಬಾರಿ ಆರೋಪಿ ನನ್ನನ್ನು ಭೇಟಿಯಾಗಿ ಸಾಲ ಕೇಳಿರುತ್ತಾರೆ. ದಿನಾಂಕಃ 15.06.2023 ರಂದು ಆರೋಪಿ ನನ್ನನ್ನು ಸಾಲ ನೀಡುವಂತೆ ಕೇಳಿದಾಗ ನಾನು ಒಂದು ವಾರ ಬಿಟ್ಟು ಬರುವಂತೆ ತಿಳಿಸಿರುತ್ತೇನೆ. ಆರೋಪಿಯು ನನ್ನಿಂದ ಪಡೆದ ಸಾಲವನ್ನು ಸದರಿ ಸಾಲ ಪಡೆದ 01 ತಿಂಗಳಲ್ಲಿ ಹಿಂತಿರುಗಿಸುವುದಾಗಿ ತಿಳಿಸಿರುತ್ತಾರೆ. ನಾನು ಆರೋಪಿಗೆ ಸದರಿ ಸಾಲದ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ಸದರಿ ಸಾಲದ ಹಣವನ್ನು ನಾನು ಆರೋಪಿಗೆ ನಮ್ಮ ಮನೆಯಲ್ಲಿ ನೀಡಿರುತ್ತೇನೆ. ನಾನು ಆರೋಪಿಗೆ ಸಾಲದ ಹಣವನ್ನು ಹಿಂತಿರುಗಿಸುವಂತೆ ಕೇಳಿದಾಗ ಅವರು ನನಗೆ ಆ ಬಗ್ಗೆ ನಿ.ಪಿ.-1 ಚೆಕ್ ಅನ್ನು ನೀಡಿರುತ್ತಾರೆ. ಆರೋಪಿ ಸದರಿ ಚೆಕ್ ಅನ್ನು ತುಂಬಿಸಿ ಸಹಿ ಮಾಡಿಕೊಟ್ಟಿರುತ್ತಾರೆ. ನಿ.ಪಿ.-1 ರಲ್ಲಿರುವ ಸಹಿ ಆರೋಪಿಯದ್ದಲ್ಲಾ ಎಂದರೆ ಸಾಕ್ಷಿ ಸದರಿ ಸಹಿಯನ್ನು ಆರೋಪಿಯೇ ಮಾಡಿಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ನಾನು ಯಾವುದೇ ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ನನಗೆ ಆರೋಪಿಯ ಪರಿಚಯವೇ

ಇರುವುದಿಲ್ಲವಾದ್ದರಿಂದ ನಾನು ಅವರ ಮೇಲೆ ಸುಳ್ಳು ಕೇಸನ್ನು ಹಾಕಿರುತ್ತೇನೆಂದರೆ ಸರಿಯಲ್ಲ. ನಾನು ಆರೋಪಿಗೆ ಸಾಲ ನೀಡುವ ಸಮಯದಲ್ಲಿ ನನ್ನಲ್ಲಿ ಅಷ್ಟು ಹಣ ಇದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಅದು ಸಣ್ಣ ಮೊತ್ತದ ಹಣವಾಗಿರುತ್ತದೆಂದು ನುಡಿಯುತ್ತಾರೆ. ನನಗೆ ಆರೋಪಿಯನ್ನು ನನ್ನ ಸ್ನೇಹಿತನಾದ ಚರಣ್ ಎನ್ನುವವರು ಪರಿಚಯ ಮಾಡಿಕೊಟ್ಟಿರುತ್ತಾರೆ. ಆರೋಪಿ ನನಗೆ ದಿನಾಂಕಃ 24.07.2023 ರಂದು ನಿ.ಪಿ.-1 ಚೆಕ್ ಅನ್ನು ಬರೆದು ಸಹಿ ಮಾಡಿಕೊಟ್ಟಿರುತ್ತಾರೆ. ಆರೋಪಿ ನಿ.ಪಿ.-1 ಚೆಕ್ ಅನ್ನು ನಮ್ಮ ಊರಿನಲ್ಲಿ ಕೊಟ್ಟಿರುತ್ತಾರೆ. ನಾನು ಕಳೆದ 02-03 ವರ್ಷಗಳಿಂದ ವ್ಯವಸಾಯ ಮಾಡಿಕೊಂಡಿರುತ್ತೇನೆ. ನನಗೆ ಸದರಿ ವ್ಯವಸಾಯದಿಂದ ವಾರ್ಷಿಕ ಸುಮಾರು 02-03 ಲಕ್ಷ ಆಧಾಯ ಬರುತ್ತದೆ. ಆ ರೀತಿ ಆಧಾಯ ಇರುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ.

**ಈ ಹಂತದಲ್ಲಿ ಅರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿಜೆ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**